## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ ಇವರು ನಿಯಮ-72 ರ ಮೇರೆಗೆ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

**ಕೋವಿಡ್ ಸೋಂಕಿನಿಂದ ರಾಜ್ಯದ ಜನರು ಬಾಧಿತರಾದ ಸಂದರ್ಭದಲ್ಲಿ, ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ವಲಯದ ಹಲವು ಕಾರ್ಮಿಕರು ಹಾಗೂ ಹಲವು ಸಣ್ಣ ಸಣ್ಣ ವೃತ್ತಿಯಲ್ಲಿ ತೊಡಗಿಕೊಂಡಿರುವ ಜನರಿಗೆ ಧನಸಹಾಯದ ಮೂಲಕ ನೆರವಾಗಿದ್ದು ಶ್ಲಾಘನೀಯ. ಆದರೆ, ಈ ಸಂದರ್ಭದಲ್ಲಿ ಹಾಗೂ ಇಂದಿಗೂ ಕೂಡಾ ಸರಿಯಾದ ವೃತ್ತಿಯಲ್ಲಿ ಕೆಲಸಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿರುವ ವೃತ್ತಿ ಛಾಯಾಗ್ರಾಹಕರು (ಫೋಟೋಗ್ರಾಫರ್ಸ್) ಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡಿರುವುದಿಲ್ಲದಿರುವುದು ವಿಷಾಧನೀಯ ಸಂಗತಿ. ಆದಕಾರಣ, ಈ ವೃತ್ತಿ ಛಾಯಾಗ್ರಾಹಕರು (ಫೋಟೋಗ್ರಾಫರ್ಸ್)ಗಳನ್ನು ಸಹ ಈ ಯೋಜನೆಗೆ ಸೇರಿಸಿಕೊಂಡು ಇವರಿಗೂ ಸಹ ಉಳಿದ ಅಸಂಘಟಿತ ವಲಯದ ಜನರಿಗೆ ನೀಡಿದಂತೆ ಧನ ಸಹಾಯವನ್ನು ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯಚಟುವಟಿಕೆಗಳ ವ್ಯಾಪ್ತಿಗೆ ಮುದ್ರಣ ಮಾಧ್ಯಮದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಸುದ್ದಿ ಛಾಯಾಗ್ರಾಹಕರು (ನ್ಯೂಸ್ ಫೋಟೋಗ್ರಾಫರ್ಸ್) ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಬಿಂಬಗ್ರಾಹಕರು (ಕ್ಯಾಮರಾಮೆನ್) ಮಾತ್ರ ಒಳಪಡುತ್ತಾರೆ. ಆದರೆ, ಮಾಧ್ಯಮ ಸಂಸ್ಥೆಗಳಲ್ಲಿ ಇವರ ಸೇವೆ, ವೇತನ ಅಥವಾ ಭತ್ಯೆಗೆ ಸಂಬಂಧಿಸಿದ ಯಾವುದೇ ತಕರಾರುಗಳಿದ್ದಲ್ಲಿ, ಅವುಗಳು ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ ಹಾಗೂ ಸದರಿ ಛಾಯಾಗ್ರಾಹಕರಿಗೆ ಯಾವುದೇ ಧನಸಹಾಯ ಪಾವತಿಸಿರುವುದಿಲ್ಲ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ, ಕೊರೋನಾ ಎರಡನೇ ಅಲೆಯನ್ನು ತಡೆಯಲು ಜಾರಿ ಮಾಡಿದ್ದ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಒಟ್ಟು 22,000 ಜನ ಚಲನಚಿತ್ರ ಮತ್ತು ಕಿರುತೆರೆ ಮಾಧ್ಯಮದಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ತಲಾ ರೂ.3,000/- ದಂತೆ ಪರಿಹಾರ ನೀಡಲಾಗಿದೆ.

ಮುಂದುವರೆದು, ಸೌಂದರ್ಯ ಸ್ಪರ್ಧೆಗಳಲ್ಲಿನ ಚಟುವಟಿಕೆಗಳ ಛಾಯಾಗ್ರಹಣ ಮಾಡುವ (ಫ್ಯಾಷನ್ ಫೋಟೋಗ್ರಾಫರ್ಸ್ ), ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಪ್ರವಾಸಿ ತಾಣಗಳನ್ನು ಚಿತ್ರಿಸುವ ಹಾಗೂ ಪ್ರವಾಸಿಗರ ಛಾಯಾಚಿತ್ರಗಳನ್ನು ಸೆರೆ ಹಿಡಿಯುವ (ಟ್ರಾವೆಲ್ ಫೋಟೋಗ್ರಾಫರ್ಸ್) ಹಾಗೂ ಕಲ್ಯಾಣ ಮಂಟಪಗಳಲ್ಲಿ ಮದುವೆ-ಮುಂಜಿಯಂತಹ ಹಾಗೂ ಇತರೆ ಶುಭ ಸಮಾರಂಭಗಳನ್ನು ಚಿತ್ರೀಕರಿಸುವ ಛಾಯಾಗ್ರಾಹಕರು (ಈವೆಂಟ್ ಫೋಟೋಗ್ರಾಫರ್ಸ್) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾ ಕಾರ್ಯ ಚಟುವಟಿಕೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ. ರಾಜ್ಯದಲ್ಲಿನ ಪತ್ರಿಕಾ ವಿತರಕರನ್ನು "ಇ- ಶ್ರಮ್" ಯೋಜನೆಯಡಿ ಅಸಂಘಟಿತ ಕಾರ್ಮಿಕರ ವಲಯಕ್ಕೆ ಸೇರ್ಪಡೆ ಮಾಡುವುದಾಗಿ ಮಾನ್ಯ ಕಾರ್ಮಿಕ ಸಚಿವರು ಘೋಷಿಸಿರುವ ಹಿನ್ನೆಲೆಯಲ್ಲಿ ಅದೇ ರೀತಿಯಲ್ಲಿ ಎಲ್ಲಾ ವರ್ಗದ ಛಾಯಾಗ್ರಾಹಕರನ್ನು ಅಸಂಘಟಿತ ಕಾರ್ಮಿಕರ ವಲಯಕ್ಕೆ ಸೇರ್ಪಡೆ ಮಾಡುವ ಕುರಿತು ಕಾರ್ಮಿಕ ಇಲಾಖೆಯ ವತಿಯಿಂದ ಪರಿಶೀಲಿಸಲಾಗುವುದು.

ಸಂಖ್ಯೆ:ಕೆಸಿಐ-ಪಿಐಪಿ/232/2021

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ